ನಾವು ವಿವರಗಳನ್ನು ಸದನದ ಮುಂದೆ ಇಡುವುದಕ್ಕೆ ತಯಾರಿದ್ದೇವೆ. ಇದರ ಬಗ್ಗೆ ತಮಗೆ ಅನುಮಾನ ಸ್ವಲ್ಪ ಕೂಡ ಬೇಕಾಗಿಲ್ಲ.

Sri K.H. RANGANATH : The Finance Commissioner should have applied his mind ಇದನ್ನು ನಾವು ಹೇಳುತ್ತಿದ್ದೇನೆ. ಏಕೆಂದರೆ 31ನೇ ತಾರೀಖು ಮಧ್ಯಾಹ್ನ ಮೂರು ಗಂಟೆಗೆ ಖರೀದಿ ಮಾಡತಕ್ಕಂಥ ತೀರ್ಮಾನ ತೆಗೆದುಕೊಂಡು ಸಾಯಂಕಾಲ 5.40ರೊಳಗೆ ಒಂದು ಕೋಟಿ 58 ಲಕ್ಷ ರೂಪಾಯಿಗಳಿಗೆ ಚೆಕ್ ಕೊಡುತ್ತೀರಿ. ನಾನು ಕಂಪ್ಯೂಟರ್ ತೆಗೆದುಕೊಳ್ಳಬಾರದು ಅಂತ ಹೇಳಿಲ್ಲ ಒಳ್ಳೆಯ ಕಂಪ್ಯೂಟರ್ ತೆಗೆದುಕೊಳ್ಳಬೇಕು. ರೆಪ್ಯೂಎಡ್ ಕಂಪನಿಯಿಂದ ತೆಗೆದುಕೊಳ್ಳಬೇಕು. ಪ್ರೊಸಿಜರ್ ಏನಿದೆ, ಅದನ್ನು ಫಾಲೋ ಮಾಡಿ ತೆಗೆಕೊಳ್ಳಬೇಕು ಅಂತ ನಾನು ಹೇಳಿದೆ. That is what I meant...

Sri S. Bangarappa : There I agree, ಪ್ರೊಸಿಜರ್ ಫಾಲೋ ಮಾಡಬೇಕು. ಒಳ್ಳೆಯ ಕಂಪನಿಯಿಂದ ತೆಗೆದುಕೊಳ್ಳಬೇಕು. ನಾವೂ ಅದನ್ನೇ ಮಾಡಿರುವುದು. ನನ್ನ ಸ್ಪಷ್ಟಾದ ಅಭಿಪ್ರಾಯ ಹೇಳುತ್ತಿದ್ದೇನೆ. ಮಾರ್ಚ್ ತಿಂಗಳ ಕೊನೆಯಲ್ಲಿ ಯಾವಾಗಲೂ ಆಗುವುದು ಹಾಗೇನೇ. ಏಕೆಂದರೆ ನಾವು ಆ ರೀತಿ ಪರ್ಚೇಸ್ ಮಾಡದೇ ಇದ್ದರೆ ಅದು ಮುಂದಿನ ವರ್ಷಕ್ಕೆ ಹೋಗುತ್ತದೆ. ಆಮೇಲೆ ನಾಳೆ ಟ್ಯಾಕ್ಸ್ ಬಿದ್ದರೆ ಹೆಚ್ಚಿಗೆ ಹಣ ನಮ್ಮ ಫಂಡ್‌ನಿಂದ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ ಅದನ್ನು ತಪ್ಪಿಸುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ ಎನ್ನುವುದಕ್ಕೆ ಕಾರಣಗಳೂ ಕೂಡ ಇವೆ. ಅವೆಲ್ಲವನ್ನು ಕೂಡ ಸದನದ ಮುಂದೆ ಇಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆ ಸಂದರ್ಭ ಬಂದಾಗ ಹೇಳೋಣ. ಇದನ್ನು ಬಿಟ್ಟರೆ ಬೇರೆ ಯಾವ ವಿಚಾರ ಕೂಡ ಬಂದಿಲ್ಲ. ಆದ್ದರಿಂದ ಇದನ್ನು ಒಪ್ಪಿಗಗಾಗಿ ತಾವು ಮಂಡಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷೆಯವರು : ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ :

1993ನೇ ಮಾರ್ಚ್ 31ರ ಅಂತ್ಯದೊಳಗೆ ದೊರಕಲಿರುವ ಪೂರಕ ಅಂದಾಜುಗಳ ಮೊದಲನೇ ಕಂತು ಬೇಡಿಕೆ ಸಂಖ್ಯೆ 5, 7, 10, 11, 21, 23, 25, 27, 28, 29, 34, 40, 41, 42, 45, 53, 57, 58, ಮತ್ತು 60ಕ್ಕೆ ಸರ್ಕಾರದವರು ಸದರಿ ವೆಚ್ಚವನ್ನು ಸಂದಾಯ ಮಾಡುವಂತೆ ಆಗಲು ಪೂರಕ ಅಂದಾಜುಗಳ ಪಟ್ಟಿಯಲ್ಲಿ ಸೂಚಿಸಿದ ಮೊಬಲಿಗೆ ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕು.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಅನುಪೂರಕ ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಯವರೇ, 1992ನೇ ಸಾಲಿನ ಕರ್ನಾಟಕದ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷೆಯವರು : ಪ್ರಸ್ತಾಪ ಏನೆಂದರೆ "1992ನೇ ಇಸವಿಯನ್ನು ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಯವರೇ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೆಯವರು : ವಿಧೇಯಕವನ್ನು ಮಂಡಿಸಲಾಯಿತು (xx x) ಅನುಬಂಧ – III

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಣಿಯವರೇ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಉಪಾಧ್ಯಕ್ಷೆಣಿಯವರು : ಪ್ರಸ್ತಾಪ ಏನೆಂದರೆ, "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಉಪಾಧ್ಯಕ್ಷೆಣಿಯವರು : ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಬಂಧ III

ಖಂಡ 1 ಇತ್ಯಾದಿ

ಉಪಾಧ್ಯಕ್ಷೆಣಿಯವರು : ಪ್ರಸ್ತಾಪ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ" ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷೆಣಿಯವರೇ, "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷೆಣಿಯವರು : ಪ್ರಸ್ತಾಪ ಏನೆಂದರೆ "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಕುಣಿಗಲ್‌ನಲ್ಲಿ ನಡೆದ ಗೋಲಿಬಾರ್ ಬಗ್ಗೆ :